ಜವಾಬ್ದಾರಿಯನ್ನು ತೆಗೆದುಕೊಂಡು, ವೇತನವನ್ನು ಯಾವರೀತಿ ಜಾಸ್ತಿ ಮಾಡಬೇಕು, ಏನೇನು ಕ್ರಮ ತೆಗೆದುಕೊಳ್ಳಬೇಕೆನ್ನುವುದನ್ನು ನೋಡಿ ಆದಷ್ಟು ಬೇಗ ವಿಷಯವನ್ನು ಸದನದ ಗಮನಕ್ಕೆ ತರುವಂತಹ ಕೆಲಸವನ್ನು ಮಾಡುತ್ತೇನೆ.

(ಖಖ) ವಿಷಯ: <u>ಹರಿಹರದ ಹತ್ತಿರ ತುಂಗಭದ್ರ ನದಿಗೆ ಸೇತುವೆ ನಿರ್ಮಾಣ ಮಾಡಲು ಟೆಂಡರ್ ಕರೆದಿದ್ದು, ಗುತ್ತಿಗೆದಾರರು ಕಾಮಗಾರಿ ಪ್ರಾರಂಭಿಸಿಲ್ಲದಿರುವುದರ ಬಗ್ಗೆ</u> :-

ಶ್ರೀ ಬಿ.ಪಿ. ಹರೀಶ್(ಹರಿಹರ) :- ಸನ್ಮಾನ್ಯ ಸಭಾಧ್ಯಕ್ಷರೇ, ಹರಿಹರದ ಹತ್ತಿರ ತುಂಗಭದ್ರ ನದಿಗೆ ಸೇತುವೆ ನಿರ್ಮಾಣ ಮಾಡಲು ಟೆಂಡರ್ ಕರೆದಿದ್ದು, ಗುತ್ತಿಗೆದಾರರು ಕಾಮಗಾರಿ ಪ್ರಾರಂಭಿಸಿಲ್ಲದಿರುವುದರ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ (ಲೋಕೋಪಯೋಗಿ ಸಚಿವರ ಪರವಾ) :- ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ದಾವಣಗೆರೆ ಜಿಲ್ಲೆ ಹರಿಹರದ ಹತ್ತಿರ ಕಿ.ಮೀ 278.30 ರಲ್ಲಿ ತುಂಗಭದ್ರ ನದಿಗೆ ಸೇತುವೆ ನಿರ್ಮಾಣ ಕೆಲಸವು 3 ನೇ ಹಂತದ ಸೇತುವೆ ಪಟ್ಟಿಯಲ್ಲಿ ರೂ. 600.00 ಲಕ್ಷಗಳಿಗೆ ಮಂಜೂರಾಗಿದ್ದು, ಈ ಕಾಮಗಾರಿಯನ್ನು ಮೂರನೇ ಹಂತದ ಸೇತುವೆಯ ಪ್ಯಾಕೇಜು-3 ರಲ್ಲಿ ತೆಗೆದುಕೊಂಡಿದೆ. ಈ ಕಾಮಗಾರಿಯನ್ನು ಮೆ|| ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂ. ಲಿಮಿಟೆಡ್ ಇವರಿಗೆ ಸೆಪ್ಟೆಂಬರ್ 2006 ರಲ್ಲಿ ವಹಿಸಲಾಗಿರುತ್ತದೆ. ಗುತ್ತಿಗೆದಾರರು ಸರ್ವೆ, ಮಣ್ಣಿನ ಪರೀಕ್ಷೆ, ವಿನ್ಯಾಸ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿದಾಗ ಈ ಕಾಮಗಾರಿಗೆ ಒಟ್ಟು ರೂ. 2480 ಲಕ್ಷ ರೂ.ಗಳು ಬೇಕಾಗಿರುತ್ತದೆ. ಸದರಿ ಸೇತುವೆಗೆ ಸರ್ಕಾರದ ಆದೇಶದಲ್ಲಿ ನಮೂದಿಸಿದ ಮೊತ್ತದ ಬದಲಿಗೆ ರೂ. 2480 ಲಕ್ಷಗಳು ಬೇಕಿರುತ್ತದೆ. ಆದ್ದರಿಂದ, ಸದರಿ ಸೇತುವೆಗೆ ಹೆಚ್ಚುವರಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು ಈ ಬಗ್ಗೆ ಆರ್ಥಿಕ ಇಲಾಖೆಯೊದಿಗೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಈ ವರ್ಷದ ಬಜೆಟ್‌ನಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುವ ಉದ್ದೇಶವನ್ನು ಹೊಂದಿದ್ದೇವೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀಮತಿ ಶೋಭಾ ಕರಂದ್ಲಾಂಜೆ :- ಈ ವರ್ಷದ ಬಜೆಟ್‌ನಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ಇದ್ದು ಅದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ.ಪಿ. ಹರೀಶ್ :- ಸನ್ಮಾನ್ಯ ಅಧ್ಯಕ್ಷರೇ, ಹರಿಹರದ ಬಳಿಯಿರುವ ಸೇತುವೆಗೆ 2006ರಲ್ಲಿ ಕೇವಲ ಆರು ಕೋಟಿ ರೂಪಾಯಿ ಹಣಕ್ಕೆ ಕಾಮಗಾರಿಯನ್ನು ನಾಗಾರ್ಜುನ construction ಗೆ ನೀಡಲಾಗಿತ್ತು. ಈಗ 2009ರಲ್ಲಿ ಆ ಸಂಸ್ಥೆ ಸುಮಾರು 25 ಕೋಟಿ ರೂಪಾಯಿ ಅವಶ್ಯಕತೆ ಇದೆಯೆಂದು ಅವರು ತಿಳಿಸಿದ್ದಾರೆ. ಈ ಹರಿಹರದ ಸೇತುವೆ 1980ನೇ ಇಸವಿಯಲ್ಲಿ ಬಂದ್ ಆಗಿದೆ. ಅಂದರೆ ಇಲ್ಲಿಗೆ ಸುಮಾರು 29 ವರ್ಷಗಳು ಕಳೆದುಹೋಗಿವೆ. ಈ ಸೇತುವೆ ಸಿಂತ ದಿನದಿಂದ ಅಲ್ಲಿ ಹೋಗತಕ್ಕಂಥ ವಾಹನಗಳು ಸುಮಾರು ಎಂಟು ಕಿ.ಮೀ ಸುತ್ತಿಬಳಸಿ ಹೋಗಬೇಕಾಗುತ್ತದೆ. ಈ ರಸ್ತೆಯಲ್ಲಿ ಕೆಎಸ್‌ಆರ್‌ಟಿಸಿ ಬೆಂಗಳೂರು ಹಾಗೂ ಹಾಸನ ಶಿವಮೊಗ್ಗ ಕಡೆಯಿಂದ ಸುಮಾರು 500 ಬಸ್ಸುಗಳು ಉತ್ತರ ಕರ್ನಾಟಕಕ್ಕೆ ಬರುತ್ತವೆ. ಅದೇರೀತಿ ಉತ್ತರ ಕರ್ನಾಟಕದಿಂದ ರಾಜ್ಯದ ಬೇರೆ ಭಾಗಗಳಿಗೆ ಸುಮಾರು 500 ಬಸ್ಸುಗಳು ಹೋಗುತ್ತವೆ. ಎಂದರೆ ಒಂದು ಸಾವಿರ ಬಸ್ಸುಗಳು ಈ ಸೇತುವೆ ಮೂಲಕ ಹೋಗುವುದರಿಂದ ನಮ್ಮ corporation ನ ಅಂದಾಜಿನಂತೆ ಒಂದು ಕಿ. ಮೀ 20 ರೂಪಾಯಿ ವೆಚ್ಚ ತಗಲುತ್ತದೆ. ಅಂದರೆ ಒಂದು ಸಾವಿರ ಬಸ್ಸಿಗೆ ತಿಂಗಳಿಗೆ ಸುಮಾರು 50 ಲಕ್ಷದಷ್ಟು ನಮ್ಮ ಸರ್ಕಾರಕ್ಕೆ ಹೊರೆಯಾಗುತ್ತಿದೆ. ಅದರ ಜೊತೆಯಲ್ಲಿ ಲಾರಿ ಇನ್ನಿತರ ವಾಹನಗಳಿಂದ ಸುಮಾರು 25 ಲಕ್ಷ ರೂಪಾಯಿ ಎಂದರೆ ಒಂದು ವರ್ಷಕ್ಕೆ ನಮ್ಮ ಸರ್ಕಾರಕ್ಕೆ ಜನಸಾಮಾನ್ಯರಿಗೆ 9 ಕೋಟಿ ರೂಪಾಯಿ ಹಣ ಇದರಿಂದ ನಷ್ಟವಾಗುತ್ತಿದೆ. ಅದು ಅಷ್ಟೇ ಅಲ್ಲ, ನಮ್ಮ ಕರ್ನಾಟಕದಲ್ಲಿ air strip ಇರತಕ್ಕಂತಾದ್ದು ಹರಿಹರದ ಬಿರ್ಲಾ ಕಾರ್ಖಾನೆಯಲ್ಲಿ. ತಮಗೆ ತಿಳಿದಿರುವ ಹಾಗೆ ಬಿರ್ಲಾ ಕಾರ್ಖಾನೆಯ air strip ನಲ್ಲಿ aero plane land ಆಗುವುದರಿಂದ ಅನೇಕ ಗಣ್ಯರು ಹರಿಹರ ದಾವಣಗೆರೆಗೆ ಬರುವುದಕ್ಕೆ ಎಂಟು ಕಿ.ಮೀ ಸುತ್ತಿಬಳಸಿ ಬರಬೇಕು. ಇದು ಎಂಟು ಕಿ.ಮೀ ಪ್ರಶ್ನೆ ಅಷ್ಟೇ ಅಲ್ಲ ಇದರ ಜೊತೆಯಲ್ಲಿ ಅರ್ಧ ಗಂಟೆಗಳ ಕಾಲ ಸಮಯ ಕೂಡ ವ್ಯರ್ಥವಾಗುವುದಿದ್ದು, ಇಂತಹ ಒಂದು ಯೋಜನೆಗೆ ಸರ್ಕಾರ 30 ವರ್ಷ ತೆಗೆದುಕೊಳ್ಳತಕ್ಕಂಥಾದ್ದು, ನಿಜಕ್ಕೂ ಸರ್ಕಾರಕ್ಕೆ ಜನ ಸಾಮಾನ್ಯರಿಗೆ ಹಣ ಮತ್ತು ಸಮಯ ಕೂಡ ವ್ಯರ್ಥವಾಗಿದೆ. ಇದನ್ನು ತಪ್ಪಿಸುವುದಕ್ಕೆ ಆದಷ್ಟುಬೇಗ ಈ ಒಂದು ಕಾಮಗಾರಿಯನ್ನು ಕೈಗೆತ್ತಿಕೊಂಡು ಸರ್ಕಾರದ

ಬೊಕ್ಕಸಕ್ಕೆ ಆಗುತ್ತಿರುವಂತಹ ಹೊರೆಯನ್ನು ಕಡಿಮೆ ಮಾಡಬೇಕೆಂದು ನಾನು ಲೋಕೋಪಯೋಗಿ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಿಳಿಸಿರುವಂತಹ ಈ ಯೋಜನೆ ಈಗಾಗಲೇ ಕಳೆದ 29 ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ನಮ್ಮ ಸರ್ಕಾರ ಬರುವ ಆರ್ಥಿಕ ವರ್ಷದಲ್ಲಿ ಈ ಕೆಲಸಕ್ಕೆ ಆದ್ಯತೆ ಕೊಟ್ಟು ತೆಗೆದುಕೊಳ್ಳುತ್ತೇವೆ ಎನ್ನುವಂತಹ ಭರವಸೆಯನ್ನು ಕೊಡುತ್ತೇನೆ.

(ಎ) ವಿಷಯ: <u>ವೀರರಾಣಿ ಚಿನ್ನಮ್ಮಾಜಿಯ ಕಿತ್ತೂರನ್ನು ಪೂರ್ಣಪ್ರಮಾಣದ ತಾಲ್ಲೂಕನ್ನಾಗಿ ಘೋಷಿಸುವ ಬಗ್ಗೆ</u> :

ಶ್ರೀ ಸುರೇಶ್ ಮಾರಿಹಾಳ್ :- ಮಾನ್ಯ ಅಧ್ಯಕ್ಷರೇ, ನಾನು ವೀರರಾಣಿ ಚೆನ್ನಮಾಜಿಯ ಕಿತ್ತೂರನ್ನು ಪೂರ್ಣ ಪ್ರಮಾಣದ ತಾಲ್ಲೂಕನ್ನಾಗಿ ಘೋಷಿಸುವ ಬಗ್ಗೆ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಕರುಣಾಕರ ರೆಡ್ಡಿ:- ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆ ಕುರಿತು ವಿವರವಾಗಿ ಅಧ್ಯಯನ ಮಾಡಿ ವರದಿ ಸಲ್ಲಿಸುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ ಕಂಇ 28 ಭೂದಾಮು 2007 ದಿನಾಂಕ 29-08-2007 ಹಾಗೂ ದಿನಾಂಕ 5-10-2007 ರಲ್ಲಿ ಸರ್ಕಾರವು ತಾಲ್ಲೂಕು ಪುನರ್ ರಚನಾ ಸಮತಿಯನ್ನು ರಚಿಸಿದೆ. ಈ ಸಮಿತಿಯಲ್ಲಿ ಪ್ರಸ್ತುತ ಈ ಕೆಳಕಂಡ ಅಧ್ಯಕ್ಷರು ಹಾಗೂ ಸದಸ್ಯರುಗಳಿದ್ದಾರೆ.

1. ಶ್ರೀ ಎಂ.ಬಿ. ಪ್ರಕಾಶ್, ಭಾ.ಆ. ಸೇ. (ನಿ) ಅಧ್ಯಕ್ಷರು
2. ಶ್ರೀ ಚಿರಂಜೀವಿಸಿಂಗ್, ಭಾ.ಆ.ಸೇ. (ನಿ) ಸದಸ್ಯರು
3. ಶ್ರೀ ಹೆಚ್. ಶಿವಾನಂದ, ಭಾ.ಆ.ಸೇ. (ನಿ) ಸದಸ್ಯರು
4. ಶ್ರೀ ಜಿ.ಎಸ್. ನಾರಾಯಣ ಸ್ವಾಮಿ ಭಾ.ಆ.ಸೇ. (ನಿ) ಸದಸ್ಯ ಕಾರ್ಯದರ್ಶಿ
   ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ